ಈ ಲೇಖನದಲ್ಲಿ ಬರುವ ಎಲ್ಲ ಪಾತ್ರಗಳೂ ಕಾಲ್ಪನಿಕ, ಯಾವುದೇ ಹೋಲಿಕೆ ಕಂಡುಬಂದಲ್ಲಿ ಅದು ಕೇವಲ ಆಕಸ್ಮಿಕ.

# ಆಫೀಸಿಗೆ ಹೊರಟಾಗ...

ಮುಂಜಾನೆ ಏಳೂವರೆ ಆಗೋಷ್ಟೊತ್ತಿನಲ್ಲಿ ಸ್ನಾನ ಮುಗಿದಿರುತ್ತೆ. ತಲೆ ಒರೆಸಿಕೊಳ್ಳುತ್ತಾ ಅವಳ ಪಾಕಶಾಲೆಗೆ ಹೋಗಿ ಅವಳಿಗೊಂದಿಷ್ಟು ತಲೆಯಲ್ಲಿನ ನೀರು ಸಿಡಿಸಿ ಬೈಸಿಕೊಳ್ಳುತ್ತಿರುತ್ತೇನೆ. ಹೆಚ್ಚಿಟ್ಟ ತರಕಾರಿಯಲ್ಲಿ ಒಂದು ಗಜ್ಜರಿಯೊ ಸೌತೆಕಾಯಿಯೊ ಎತ್ತಲು ಕೈ ಹಾಕಿ ಸೌಟಿನಲ್ಲಿ ಏಟು ತಿಂದು ಹೊರಗೆ ಬಂದು, ದೇವರಿಗೊಂದು ನಮಸ್ಕಾರ ಹೇಳಿ, ಇಂಥ ನೆಚ್ಚಿನ ಹುಡುಗಿ ಜೊತೆ ಮಾಡಿದ್ದಕ್ಕೆ ಥ್ಯಾಂಕ್ಸ್ ಅಂದು. ಆಫೀಸಿನಲ್ಲಿ ತಲೆ ತಿನ್ನುತ್ತಿರುವ ಕೋಡೊಂದು ಹೇಗಾದ್ರೂ ಮಾಡಿ ವರ್ಕ್ ಆಗೋ ಹಾಗೆ ಮಾಡಪ್ಪ ಅಂತಾನೊ, ಇಲ್ಲ ವೀಕೆಂಡಿಗೆ ಕೆಲಸ ಬರದಿರುವ ಹಾಗೆ ಮಾಡೊ ಅಂತಾನೊ ಏನೊ ಒಂದು ಬೇಡಿಕೆ ಸಲ್ಲಿಸಿ ಡ್ರೆಸ್ ಹಾಕಿಕೊಳ್ಳಲು ಬೆಡ್ ರೂಂಗೆ ಹೋಗುತ್ತ ಈ ವೀಕೆಂಡು ಕೆಲ್ಸ ಇದೆ ರಜೆ ಇಲ್ಲಾ ಅಂತ ಡಂಗುರ ಸಾರುತ್ತೇನೆ. "ಯಾಕ್ರೀ ಶಾಪಿಂಗ್ ಹೊಗೋಣ ಅಂತಾ ಕಾಡ್ತೀನಿ ಅಂತ ಆಫೀಸಿಗೆ ಹೊಗ್ತಿದಿರೊ ಹೇಗೆ" ಅಂತಾಳೆ, ಇಲ್ಲ ನಿಜ ಪ್ರೊಜೆಕ್ಟ್ ರಿಲೀಸು ಇದೆ ಅಂದ್ರೆ. ಏನ್ರಿ ಅದು ನಿಮ್ಮ ಪ್ರೊಜೆಕ್ಟ ಹೆಸ್ರು "ಬುಲ್ ಶಿಟ್ಟಾ" ಅಂತಾಳೆ. "ಲೇ ಇಂಗ್ಲೆಂಡಿನ ಮಹರಾಣಿ ನಿನ್ನ ಇಂಗ್ಲೀಶೋ ನೀನೊ ಎಲ್ಲಾ ಸರಿಯಾಗಿದೆ" ಅಂದ್ರೆ "ಮತ್ತಿನ್ನೇನ್ರಿ ಯಾವಾಗ್ಲೂ ಬುಲ್ ಶಿಟ್ ಪ್ರೊಜೆಕ್ಟ ಬುಲ್ ಶಿಟ್ ಪ್ರೊಜೆಕ್ಟ್ ಅಂತಿರ್ತೀರ ಅದಕ್ಕೆ ಅದೇ ಹೆಸ್ರೇನೊ ಅನ್ಕೊಂಡೆ" ಅಂತಾಳೆ. ಅದೂ ಕರೆಕ್ಟೆ ಬಿಡು ಅಂದು. ಹಾಸಿಗೆ ಮೇಲೆ ಅವಳು ತಾಸುಗಟ್ಟಲೆ ತಲೆ ಕೆಡಿಸಿಕೊಂಡು ತನಗಿಷ್ಟವಾದೊಂದು ಡ್ರೆಸ್ಸ್ ಆರಿಸಿ ತೆಗೆದಿಟ್ಟಿರುತ್ತಾಳೆ, ಅದರಲ್ಲಿ ತೂರಿಕೊಳ್ಳುತ್ತೇನೆ.

ಡಿಯೋಡ್ರಂಟ ಹಾಕಿಕೊಳ್ಳುತ್ತಿದ್ದಂತೇನೇ ಅದರ ಸುವಾಸನೆಗೆ "ಪರಿಮಳ" ನೆನಪಾಗಿ ಬಿಡ್ತಾರೆ, ಇವಳು ಸೇರಿಕೊಂಡಿರುವ ಸೊಷಿಯಲ್ ಕ್ಲಬ್ ಚೇರಮನ್ ಅವ್ರು, ಹೆಸ್ರೇನೊ ಬೇರೆ ಇದೆ, ಆದ್ರೆ ಅವರು ಹಾಕಿಕೊಳ್ಳೊ ಆ ಘಮ್ ಅಂತಿರೋ ಸೆಂಟ್ ವಾಸನೆ ನೋಡಿ "ಪರಿಮಳ"  ಅಂತಾ ನಾವಿಟ್ಟಿರೊ ಹೆಸ್ರು, ಸೆಂಟು ಬಾಟಲಿನಲ್ಲೆ ಮುಳುಗಿ ಒಂದು ಡುಮುಕಿ ಹೊಡೆದು ಬಂದಿರ್ತಾರೆ ಅಂತ ಕಾಣುತ್ತೆ, ಇವ್ರೊ ಮನೆಗೆ ಅವ್ರು ಬಂದಾಗ ಅದು ಇದು ತೊರಿಸ್ತೀನಿ ಅಂತ ಮನೆ ತುಂಬಾ ಸುತ್ತಾಡಿಸಿ ರೂಂ ಫ್ರೆಶ್ನರ್ ಖರ್ಚು ಉಳಿಸಿರ್ತಾಳೇ. ಲೇ ಪರಿಮಳ ಯಾವಾಗ ಬರ್ತಾರೇ ಅಂದ್ರೆ ಇನ್ನೇನು ಮುಂದಿನ ವಾರ ಕರೆಯೊಣಾ ಅಂತಿದೀನಿ ಅತ್ತೆ ಬರ್ತಿದಾರಲ್ಲ ಮನೆ ಘಮ್ ಅಂದ್ರೆ ಅವ್ರಿಗೂ ಖುಶಿಯಾಗುತ್ತೆ ಅಂದ್ಲು, ಒಳ್ಳೆ ಪ್ಲಾನೇ ಹಾಕಿರ್ತಾಳೆ ಅಮ್ಮನ್ನ ಇಂಪ್ರೆಸ್ ಮಾಡಿ ಅದೇ ಟೈಮಿನಲ್ಲಿ "ಲೇ ಕಂಜ್ಯೂಸಾ ಎರಡು ಸೀರೆ ಕೊಡ್ಸೊ ಅವ್ಳಿಗೆ" ಅಂತ ಬೈಸಿ ನಾಲ್ಕು ಸೀರೆ ತುಗೊಂಡು ನನ್ನ ಕ್ರೆಡಿಟ್ ಕಾರ್ಡ ಲಿಮಿಟ್ಟು ಮೀರಿಸಿ ಬಿಟ್ಟಿರ್ತಾಳೆ.

ಅಂತೂ ರೆಡಿಯಾಗಿ ಡೈನಿಂಗ್ ಟೇಬಲ್ಲಿಗೆ ಬಂದ್ರೆ, ತಿಂದು ಸ್ವಲ್ಪ ದಪ್ಪ ಆಗ್ಲಿ ಅಂತಾ ಅವಳು ನಾಲ್ಕು ಜನರಿಗಾಗುವಷ್ಟು ಹಾಕಿಟ್ಟ ಟಿಫಿನ್ನು ಅದೇ ಗಡಿಬಿಡಿಯಲ್ಲಿ ಹಾಗೆ ಹೀಗೆ ಮಾಡಿ ಮುಗಿಸಿ, ಇನ್ನೇನು ಮಧ್ಯಾನ್ಹ ಲಂಚ್ ಬೇಡವೇ ಬೇಡ ಅನ್ನಿಸಿದ್ರೂ, ಅದೊ ಅಲ್ಲಿ ಲಂಚ್ ಬಾಕ್ಸ ರೆಡಿ ಮಾಡಿರ್ತಾಳೆ. ನಾನೇನು ತಿಂದು ಹೃತಿಕ್ ರೋಷನ್ನು (ಅವಳ ಫೆವರಿಟ್ಟು!) ಆಗಲ್ಲಾ ಕಣೇ ಅಂದ್ರೂ ಅವ್ಳು ಕೇಳಲ್ಲ. ಮಾತಿಲ್ಲದೆ ಬಾಕ್ಸ್ ಬ್ಯಾಗಿಗೆ ಹಾಕಿಕೊಳ್ಳುತ್ತೇನೆ. ಹೊರಡಲು ಶೂ ಹಾಕಿಕೊಳ್ಳ ಹೋದ್ರೆ ಸಾಕ್ಸು ಸಿಗಲ್ಲ, "ಲೇ ತಗಡು ಸಾಕ್ಸ ಎಲ್ಲೇ" ಅಂತ ಚೀರುತ್ತೇನೆ, ಸಿಟ್ಟು ಎನ್ ಬಂದಿರಲ್ಲ, ತಗಡು ಅನ್ನೋದು ಅತೀ ಪ್ರೀತಿ ಬಂದಾಗ, ಯಾವಾಗ್ಲೊ ಚಿನ್ನಾ ಅಂದ್ರೆ ಹಳೆಯದಾಯಿತ್ರಿ ಅಂದ್ಲು, ಪ್ಲಾಟಿನಮ್ಮು ಅನ್ಲಾ ಅಂದ್ರೆ ಜಾಸ್ತಿ ಆಯ್ತು ಅಂದದ್ದಕ್ಕೆ ಪ್ರೀತಿಯಿಂದ ತಗಡು ಅಂತೀನಿ.  ಸಾಕ್ಸು ಅಲ್ಲೇ ಬಿದ್ದಿರತ್ತೆ ನಂಗೆ ಮಾತ್ರ ಕಾಣಲ್ಲ ಬಂದು ಅವ್ಳು ಹುಡುಕಿ ಕೊಟ್ರೇ ಸಿಗ್ಬೇಕು.

ಅಪ್ಪಿ ಪಪ್ಪಿಯೊಂದು ಕೊಟ್ಟು ಹೊರಟರೆ, ಬಾಗಿಲಿ ಒರಗಿ ನಿಂತುಕೊಂಡು ನಾ ಬರುವುದು ರಾತ್ರಿಯೆಂದು ಗೊತ್ತಿದ್ರೂ "ಸಂಜೆ ಬೇಗ ಬನ್ರಿ" ಅಂತಿರುವ ಅವಳಿಗೆ ಕೈ ಮಾಡಿ ಬೈಕಿನ ಗೇರು ಹಾಕುತ್ತಿದ್ದರೆ ಕಿಟಕಿ ಸಂದಿಯಲ್ಲಿ ಪಕ್ಕದ ಮನೆ ಪದ್ದು ನೊಡುತ್ತಿರುತ್ತಾಳೆ. ಆಫೀಸಿನಲ್ಲಿ ಕೆಲಸ ಬಹಳ ಇದೆ, ಈ ಟ್ರಾಫಿಕ್ಕು ಬೇರೆ ಮತ್ತೊಂದಿನಾ ಸಿಗ್ನಲ್ಲಿನಲ್ಲಿ ಸಿಗುವ ಸುಂದರಿಯರೊಂದಿಗೆ ಭೇಟಿಯಾಗ್ತೇನೆ, ಬೈ ಬೈ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...